Form No.4 (Civil) Deposition Sheets (R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 110/2020

ಪ್ರಾ.ಸಾ. 5 ಚಾ.ಸಾ. 7

| | | |
|---|---|---|
| ಹೆಸರು | : | ವಿನಯ ಪಾಟೀಲ್ |
| ತಂದೆಯ ಹೆಸರು | : | ಶಿವಪ್ಪ ಪಾಟೀಲ್ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಉಪನಿರ್ದೇಶಕರು ಆಹಾರ ಮತ್ತು ನಾಗರಿಕ ಸಾಬರಾಜು ಇಲಾಖೆ |
| ವಾಸ | : | ವಿಜಯಪೂರ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 12-11-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ದಿಃ07-11-2019 ರಿಂದ ದಿಃ 17-04-2021 ರವರೆಗೆ ತಹಸೀಲದಾರರಾಗಿ ಹುಣಸಗಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೆನೆ.

2. ನಾನು ದಿಃ 24-09-2020 ರಂದು ಬೆಃ 10-00 ಗಂಟೆಯ ಸುಮಾರಿಗೆ ಕೆಂಭಾವಿ ಹೊಗುವಾಗ ಚಾಸಾಃ 20 ರವರು ನನ್ನನ್ನು ಕೆಂಭಾವಿ ಪೊಲಿಸ ಠಾಣೆಗೆ ಈ ಪ್ರಕರಣದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಅಗ್ನಿ ಗ್ರಾಮದ ಸೀಮಾಂತರದ ಸರ್ವೆ ನಂ. 176 ರಲ್ಲಿ ಆರೊಪಿ ಶಂಕರಸಿಂಗ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ದಾಳಿ ಮಾಡಲು ಹೋಗಬೇಕು ಎಂದು ಅದಕ್ಕೆ ನಾನು ಸಹಕರಿಸಿ ಎಂದು ಹೇಳಿದರು. ಆ ಪ್ರಕಾರ ನಾನು ಒಪ್ಪಿಕೊಂಡೆನು. ನಾನು ಹಾಗೂ ಚಾಸಾಃ 1 ರಿಂದ 4 ರವರು ಮತ್ತು ಗ್ರಾಮ ಲೆಕ್ಕಧಿಕಾರ ಮತ್ತು ತೂಕ ಮಾಡುವವರು ಯಂತ್ರದೊಂದಿಗೆ ಬೆಳಿಗ್ಗೆ 11-30 ಗಂಟೆಗೆ ಪೊಲೀಸಠಾಣೆಯಿಂದ ಸರಕಾರಿ ವಾಹನಗಳಲ್ಲಿ ಬಿಟ್ಟೆವು ಘಟನಾ ಸ್ಥಳಕ್ಕೆ ಮಃ 12-30 ಗಂಟೆಗೆ ತಲುಪಿದೆವು. ನಾವು ಅಲ್ಲಿ ಜೀಪುಗಳನ್ನು ನಿಲ್ಲಿಸಿ ಕಾಲು ನಡುಗೆಯಲಿ ಸುಮಾರು 1 ಕಿ.ಮೀ. ವರೆಗೆ ಹೋದೆವು. ನಮ್ಮ ಗ್ರಾಮ ಲೆಕ್ಕಧಿಕಾರ ಸದರಿ ಸರ್ವೆ ನಂಬರನ ಜಮಿನನ್ನು ನನಗೆ ತೊರಿಸಿರತ್ತಾರೆ. ನಾವು ಹೋಗುವಾಗ ನಮ್ಮನ್ನು ನೋಡಿ ಅಲ್ಲಿ ನಿಂತ್ತಿದ್ದ ಒಬ್ಬರು ಓಡಿ ಹೋದರು. ನಾವು ಅಲ್ಲಿ ಹೋಗಿ ನೊಡಿದಾಗ ಸರ್ವೆ

ನಂಬರ 176 ರಲ್ಲಿ ಹತ್ತಿ ಬೆಳೆದಿದ್ದು ನಡುವೆ ಗಾಂಜಾ ಗಿಡಗಳನ್ನು ಉತ್ತರ ಮತ್ತು ದಕ್ಷಿಣ ದಿಕ್ಕಿನ ಜಮೀನಿನಲ್ಲಿ ಬೆಳೆದಿದ್ದು ಕಂಡು ಬಂತು. ನಂತರ ನಾವು ಪಂಚರ ಸಮಕ್ಷಮ ನಮ್ಮ ಮುಂದೆ 2 ಫಿಟನ 70 ಗಾಂಜಾ ಗಿಡಗಳನ್ನು ಮತ್ತು 3 ವರೆ ಫೀಟನ 20 ಗಾಂಜಾ ಗಿಡಗಳನ್ನು ಕಿತ್ತಿ ಅವುಗಳಲ್ಲಿ 5-5 ಗಿಡಗಳನ್ನು ಪೆಂಡಿ ಮಾಡಿ ಅವುಗಳನ್ನು ತೂಕ ಮಾಡಿದಾಗ ಒಟ್ಟು 22 ಕೆ.ಜಿ 400 ಗ್ರಾಮ ಗಾಂಜಾ ಇತ್ತು. ಅದರಲ್ಲಿ 100 ಗ್ರಾಂ ನಷ್ಟು ಪ್ರತ್ಯೇಕೀಸಿ ವಿ.ವಿ.ಫ್ರಾ ಗೆ ಶೇಖರಿಸಲಾಯಿತು. ನಂತರ ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಸಿಲ್ ಮಾಡಿ ಪಂಚರ ಸಹಿ ಪಡೆದೆವು. ಅವುಗಳನ್ನು ಚಾಸಾಃ 1 ರವರಿಗೆ ಹಸ್ತಾಂತರಿಸಿ ಬಂದೆವು. ನಿ.ಪಿ.1ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಡಿ) ಎಂದು ಗುರುತಿಸಲಾಯಿತು. ನಿ.ಪಿ.3, 5, 6 ಭಾವಚಿತ್ರಗಳಲ್ಲಿ ಸಾಕ್ಷಿ ತಮ್ಮ ಭಾವಚಿತ್ರ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಕೆ ಟಿ ವಕೀಲರಿಂದ</u>

3. ಸದರಿ ಸರ್ವೆ ನಂಃ 176 ಗೆ ಹೋಗುವುದಕ್ಕೆ ಚಾಸಾಃ 4 ರವರು ನನಗೆ ಕರೆ ಮಾಡಿರುತ್ತಾರೆ. ನಾನು ಆ ಸಮಯದಲ್ಲಿ ಕೆಂಭಾವಿ ಪೊಲಿಸ ಠಾಣೆಯ ಸಮಿಪ ಹೊಗುತ್ತಿದ್ದು. ನಾನು ಠಾಣೆಗೆ ಹೊದಾಗ ಬೆಃ 10-00 ಗಂಟೆ ಆಗಿತ್ತು. ನಾನು ಸುಮಾರು 1-00 ಗಂಟೆ ಕಾಲ ಠಾಣೆಯಲ್ಲಿ ಕುಳುತಿದ್ದೆ. ನಾನು ಠಾಣೆಗೆ ಹೊಗಲು ಮೆಲಾಧಿಕಾರಿಯಿಂದ ಅನೂಮತಿ ಪಡೆದಿರಲಿಲ್ಲ. ಗ್ರಾಮ ಲೆಕ್ಕಾಧಿಕಾರಿಯನ್ನು ನಾನೆ ಠಾಣೆಗೆ ಹೊದ ನಂತರ ಕರೆಸಿದ್ದೆ. ನಾನು ಆರೋಪಿತನ ಜಮೀನಿನ ಪಹಣಿ ನೊಡಿರುತ್ತೆನೆ. ನನಗೆ ಸದರಿ ಜಮೀನಿನ ಮಾಲಿಕರು ಯಾರು ಇರುತ್ತಾರೆಂದು ಈಗ ಹೇಳಲು ಬರುವುದಿಲ್ಲ. ಕೆಂಭಾವಿ ಠಾಣೆಯಂದ ಅಗ್ನಿ ಸಿಮಾಂತರದ ಸರ್ವೆ ನಂಃ 176 ಕ್ಕೆ ಯಾವ ಮಾರ್ಗವಾಗಿ ಹೂೕಗಿದ್ದೆವು ಎಂದು ಹೆಳಲು ನೆನಪಿಲ್ಲ. ಆರೋಪಿತನನ್ನು 50-60 ಅಡಿ ದೂರದಿಂದ ನೊಡಿದ್ದೆ. ಪೊಲಿಸರು ಆತನನ್ನು ಹಿಡಿಯಲು ಯತ್ನಿಸಿದರು ಆದರೆ ಆತ ಓಡಿ ಹೊದ ಆತ ಯಾವ ದಿಕ್ಕಿಗೆ ಓಡಿ ಹೊದ ಎಂದು ಹೇಳಲು ಬರುವುದಲ್ಲ.

4. ಪೊಲೀಸರು ಮತ್ತು ನಮ್ಮ ಎಲ್ಲಾ ಸಿಬ್ಬಂದಗಳು ಗಾಂಜಾ ಗಿಡಗಳನ್ನು ಕಿತ್ತಿರುತ್ತಾರೆ. ಸರ್ವೆ ನಂಬರ ಗುರುತಿಸಲು ಸರ್ವೆ ಇಲಾಖೆಯ ಅಧಿಕಾರಿಗಳು ಇರುತ್ತಾರೆಂದರೆ ಸರಿ . ಗ್ರಾಮ ಲೆಕ್ಕಧಿಕಾರಿಗೆ ಸರ್ವೆ ನಂಬರಗಳನ್ನು ಗುರುತಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಸ್ಯ ಶಾಸ್ತ್ರದಲ್ಲಿ ಯಾವುದೇ ಪದವಿ ಅಥವಾ ತರಬೇತಿ ಪಡೆದಿಲ್ಲ ಎಂದರೆ ಸರಿ. ಪಂಚನಾಮೆ ನಂತರ ನಾನು ಠಾಣೆಗೆ ಹೊಗಿಲ್ಲ. ಹೊಲದ ಖಾಲಿ ಜಾಗದಲ್ಲಿ ಕೂಳಿತು ಪಂಚನಾಮೆ ಬರೆದಿರುತ್ತೆವೆ. ಪಂಚನಾಮೆ ಬರೆದವರ ಹೆಸರು ಗೊತ್ತಿಲ್ಲ. ನನ್ನ ಜೇಪು ಚಾಲಕನ ಹೆಸರು ಚಾಂದ ಎಂದು

ಇರುತ್ತದೆ ಆತ ಹೊಲದಲ್ಲಿ ಬರಲಿಲ್ಲ. ಪೊಲಿಸರು ಈ ಪ್ರಕರಣದಲ್ಲಿ ನನ್ನ ಹೇಳಿಕೆನ್ನು ಸ್ಥಳದಲ್ಲಿಯೆ ಪಡೆದಿರುತ್ತಾರೆ. ಅದನ್ನು ಅವರು ಒಂದು ಬಿಳಿ ಕಾಗದದಲ್ಲಿ ಬರೆದು ಕೊಂಡರು. ಯಾವುದೆ ದಾಳಿ ಮಾಡದಿದ್ದರೂ ಪೊಲಿಸರಿಗೆ ಸಹಾಯ ಮಾಡು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

5. ನಾನು ದಿಃ24-09-2020 ರಂದು ಬೆಃ 10-00 ಗಂಟೆಯ ಸುಮಾರಿಗೆ ಕೆಂಭಾವಿ ಹೊಗುವಾಗ ಚಾಸಾಃ 20 ರವರು ನನ್ನನ್ನು ಕೆಂಭಾವಿ ಪೊಲಿಸ ಠಾಣೆಗೆ ಈ ಪ್ರಕರಣದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಅಗ್ನಿ ಗ್ರಾಮದ ಸೀಮಾಂತರದ ಸರ್ವೆ ನಂ. 176 ರಲ್ಲಿ ಆರೊಪಿ ಶಂಕರಸಿಂಗ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ದಾಳಿ ಮಾಡಲು ಹೋಗಬೇಕು ಎಂದು ಅದಕ್ಕೆ ನಾನು ಸಹಕರಿಸಿ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು ಒಪ್ಪಿಕೊಂಡೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾಃ 1 ರಿಂದ 4 ರವರು ಮತ್ತು ಗ್ರಾಮ ಲೆಕ್ಕಧಿಕಾರ ಮತ್ತು ತೂಕ ಮಾಡುವವರು ಯಂತ್ರದೊಂದಿಗೆ ಬೆಳಿಗ್ಗೆ 11-30 ಗಂಟೆಗೆ ಪೊಲೀಸಠಾಣೆಯಿಂದ ಸರಕಾರಿ ವಾಹನಗಳಲ್ಲಿ ಬಿಟ್ಟೆವು ಘಟನಾ ಸ್ಥಳಕ್ಕೆ ಮಃ 12-30 ಗಂಟೆಗೆ ತಲುಪಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಲ್ಲಿ ಜೀಪುಗಳನ್ನು ನಿಲ್ಲಿಸಿ ಕಾಲು ನಡುಗೆಯಲಿ ಸುಮಾರು 1 ಕಿ.ಮೀ. ವರೆಗೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮ ಲೆಕ್ಕಧಿಕಾರ ಸದರಿ ಸರ್ವೆ ನಂಬರನ ಜಮಿನನ್ನು ನನಗೆ ತೊರಿಸಿರತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೋಗುವಾಗ ನಮ್ಮನ್ನು ನೋಡಿ ಅಲ್ಲಿ ನಿಂತ್ತಿದ್ದ ಒಬ್ಬರು ಓಡಿ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಲ್ಲಿ ಹೋಗಿ ನೊಡಿದಾಗ ಸರ್ವೆ ನಂಬರ 176 ರಲ್ಲಿ ಹತ್ತಿ ಬೆಳೆದಿದ್ದು ನಡುವೆ ಗಾಂಜಾ ಗಿಡಗಳನ್ನು ಉತ್ತರ ಮತ್ತು ದಕ್ಷಿಣ ದಿಕ್ಕಿನ ಜಮಿನಿನಲ್ಲಿ ಬೆಳೆದಿದ್ದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾವು ಪಂಚರ ಸಮಕ್ಷಮ ನಮ್ಮ ಮುಂದೆ 2 ಫೀಟನ 70 ಗಾಂಜಾ ಗಿಡಗಳನ್ನು ಮತ್ತು 3 ವರೆ ಫೀಟನ 20 ಗಾಂಜಾ ಗಿಡಗಳನ್ನು ಕಿತ್ತಿ ಅವುಗಳಲ್ಲಿ 5-5 ಗಿಡಗಳನ್ನು ಪೆಂಡಿ ಮಾಡಿ ಅವುಗಳನ್ನು ತೂಕ ಮಾಡಿದಾಗ ಒಟ್ಟು 22 ಕೆ.ಜಿ 400 ಗ್ರಾಮ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ 100 ಗ್ರಾಂ ನಷ್ಟು ಪ್ರತ್ಯೆಕೀಸಿ ವಿವಿಪ್ರಾಗೆ ಶೇಖರಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಸಿಲ್ ಮಾಡಿ ಪಂಚರ ಸಹಿ ಪಡೆದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳನ್ನು ಚಾಸಾಃ 1 ರವರಿಗೆ ಹಸ್ತಾಂತರಿಸಿ ಬಂದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಂಜಾ ಗಿಡ ಮತ್ತು ಪಾರ್ಥೆನಿಯಂ ಗಿಡ ಚಂಡು ಹೂವಿನ ಗಿಡಗಳು ಒಂದೆ ತರಹ ಇದ್ದು ನನಗೆ ಗುರುತಿಸಲು

ಬರುವುದಿಲ್ಲ ಎಂದಿರೆ ಸರಿಯಲ್ಲ. ಗಾಂಜಾ ಗಿಡಗಳ ಪೆಂಡಿಗಳನ್ನು ಪ್ರತೆಕವಾಗಿ ತೂಕ ಮಾಡಿ ನಂತರ ಒಟ್ಟಾಗಿ ಮತ್ತೊಮ್ಮೆ ತೂಕ ಮಾಡಿರುತ್ತೆವೇ. ಪೆಂಡಿಗಳ ಪ್ರತ್ಯೆಕ ತೂಕವನ್ನು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರ. ಪೊಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೆಳುತ್ತಿದ್ದೆವೆಂದರೆ ಸರಿಯಲ್ಲ

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.